ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗದಿಂದ ಅಭಿವೃದ್ಧಿ

ಸಕ್ಕರೆ- ಮೈದಾ ರಹಿತ ಬಿಸ್ಕತ್ತು, ಕುಕೀಸ್, ರಸ್ಕ್

• ಖಲೀಲಅಹ್ಮದ ಶೇಖ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗವು ಬಿಳಿ ರಾಗಿ ಹಾಗೂ ಸ್ಟೀವಿಯಾ ಬಳಸಿ ಸಕ್ಕರೆ ಹಾಗೂ ಮೈದಾ ಇಲ್ಲದೆಯೇ ಬೇಕರಿ ಉತ್ಪನ್ನಗಳಾದ ಬಿಸ್ಕತ್ತು, ಕುಕೀಸ್ ಮತ್ತು ರಸ್ಕ್ ತಯಾರಿಸಿದೆ.

ಆಧುನಿಕ ಜೀವನ ಶೈಲಿಯಲ್ಲಿ ಆರೋಗ್ಯಕರ ಆಹಾರಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಹೀಗಾಗಿ, ಮೈದಾ ಮತ್ತು ಸಕ್ಕರೆ ಇಲ್ಲದ ಹೊಸ ಮಾದರಿಯ ಬೇಕರಿ ಉತ್ಪನ್ನಗಳನ್ನು ತಯಾರಿಸಲಾಗಿದೆ. ಸಿಹಿ ಹಾಗೂ ಉಪ್ಪಿನ ಬಿಸ್ಕತ್ತು, ಕುಕೀಸ್ ಮತ್ತು ರಸ್ಕ್‌ನಲ್ಲಿ ಜಿಕೆವಿಕೆ ಸ್ಟೀವಿಯಾ-1 (ಸಕ್ಕರೆಗೆ ಪರ್ಯಾಯವಾಗಿ ನೈಸರ್ಗಿಕ ಸಿಹಿ ಪದಾರ್ಥ) ಮತ್ತು ಬಿಳಿ ರಾಗಿ-ಕೆಎಂಆರ್-340 ತಳಿಯ ಹಿಟ್ಟನ್ನು ಬಳಸಿಕೊಳ್ಳಲಾಗಿದೆ.




ಸ್ಟೀವಿಯಾ ಗಿಡದ ಎಲೆಗಳಿಂದ ದೊರೆಯುವ ಸಿಹಿ ಪದಾರ್ಥವು ಶೂನ್ಯ ಕ್ಯಾಲೊರಿಯದ್ದಾಗಿದೆ. ಇದು ರಕ್ತದಲ್ಲಿರುವ ಗ್ಲೂಕೋಸ್ ಮಟ್ಟದಲ್ಲಿ ವ್ಯತ್ಯಾಸ ಮಾಡುವುದಿಲ್ಲ. ಬಿಳಿ ರಾಗಿಯಲ್ಲಿ ಹೆಚ್ಚು ಕ್ಯಾಲ್ಸಿಯಂ, ಕಬ್ಬಿಣದ ಅಂಶ, ನಾರು (ಡಯಟರಿ ಫೈಬರ್) ಸೇರಿದಂತೆ ಪೌಷ್ಟಿಕಾಂಶಗಳು ಇವೆ. ಮೈದಾ ಹಿಟ್ಟಿಗೆ ಪರ್ಯಾಯವಾಗಿ ಇದನ್ನು ಬಳಸಿಕೊಳ್ಳಬಹುದು.

'ಸ್ಟೀವಿಯಾ ಮಿಶ್ರಿತ ಬೇಕರಿ ಉತ್ಪನ್ನಗಳನ್ನು ಎರಡು ವಿಧಗಳಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಸ್ಟೀವಿಯಾ ಹಸಿರು ಎಲೆ ಪುಡಿ, ಸಂಸ್ಕರಿಸಿದ ಬಿಳಿ ಸ್ಟೀವಿಯಾದ ಪುಡಿಯಲ್ಲಿ ಬಿಳಿ ರಾಗಿ ಹಿಟ್ಟನ್ನು ಮಿಶ್ರಣ ಮಾಡಿ ಹಸಿರು, ಬಿಳಿ ಬಿಸ್ಕತ್ತು, ಕುಕೀಸ್ ಮತ್ತು ರಸ್ಕ್ ತಯಾರಿಸಲಾಗಿದೆ. ಇದರಲ್ಲಿ ಕಡಿಮೆ ಪ್ರಮಾಣದ ಗ್ಲೈಸೆಮಿಕ್ ಇಂಡೆಕ್ಸ್, ಚಯಾಪಚಯ ಕ್ರಿಯೆಗೆ ಸಹಕಾರಿ ಆಗಿದೆ. ಮಾರುಕಟ್ಟೆಯಲ್ಲಿರುವ ಬೇರೆ ಬಿಸ್ಕತ್ತುಗಳಿಗೆ ಹೋಲಿಸಿದರೆ ಈ ಉತ್ಪನ್ನಗಳಲ್ಲಿ ಅಧಿಕ ಪ್ರೊಟೀನ್, ಕ್ಯಾಲ್ಸಿಯಂ ಇದೆ' ಎಂದು ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗದ ಪ್ರಾಧ್ಯಾಪಕಿ ಸವಿತಾ ಮಂಗಾನವರ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಗ್ರಾಹಕರಿಗೆ ರುಚಿಕರ ಹಾಗೂ ಗುಣಮಟ್ಟದ ಬೇಕರಿ ಉತ್ಪನ್ನಗಳನ್ನು ನೀಡುವ ಉದ್ದೇಶದಿಂದ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸಂಶೋಧನೆಗಳನ್ನು ಮಾಡುತ್ತಿದ್ದಾರೆ. ಮೈದಾ ಹಾಗೂ ಸಕ್ಕರೆ ಬಳಸದೇ ಬಿಸ್ಕತ್ತು, ಕುಕೀಸ್‌ಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ತಂತ್ರಜ್ಞಾನವನ್ನು ಖರೀದಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದ್ದು, ಅವರಿಗೆ ಮೂರು ದಿನಗಳ ತರಬೇತಿಯನ್ನೂ ನೀಡಲಾಗುತ್ತದೆ. ಈ ತಂತ್ರಜ್ಞಾನ ಖರೀದಿಗೆ ದರ ನಿಗದಿಪಡಿಸಬೇಕಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ವಿವರಿಸಿದರು.

'ಆರೋಗ್ಯಕರ ಪದಾರ್ಥಗಳಿಗೆ ಬೇಡಿಕೆ'



ಎಸ್.ವಿ.ಸುರೇಶ

'ಮೈದಾ, ಸಕ್ಕರೆ ಹಾಗೂ ಕೊಬ್ಬು ರಹಿತ ಆರೋಗ್ಯಕರ ಬೇಕರಿ ಪದಾರ್ಥಗಳಿಗೆ ಹೆಚ್ಚು ಬೇಡಿಕೆ ಇದೆ. ಜನರಲ್ಲಿ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ಬರುತ್ತಿದೆ. ಆದರೆ ಸಾರ್ವಜನಿಕರು ರುಚಿಯ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ಈಗ ಆರೋಗ್ಯ ಮತ್ತು ರುಚಿಯ ನಡುವೆ ಹೋರಾಟ ನಡೆಯುತ್ತಿದೆ. ಆದ್ದರಿಂದ ವಿಶ್ವವಿದ್ಯಾಲಯವು ರುಚಿ ಮತ್ತು ಆರೋಗ್ಯ ದೃಷ್ಟಿಯಿಂದ ಮೈದಾ, ಸಕ್ಕರೆ ಹಾಗೂ ಕೊಬ್ಬು ರಹಿತ ಬೇಕರಿ ಉತ್ಪನ್ನಗಳನ್ನು ತಯಾರಿಸುತ್ತಿದೆ' ಎಂದು ಎಸ್.ವಿ. ಸುರೇಶ 'ಪ್ರಜಾವಾಣಿ'ಗೆ ತಿಳಿಸಿದರು.

Prajavani pg 01

Prajavani pg 04

ಸಮಗ್ರ ಕೃಷಿ ವಿ.ವಿ ಸ್ಥಾಪನೆಗೆ ಶಿಫಾರಸು

ಟಿ.ಎಂ.ವಿಜಯ ಭಾಸ್ಕರ್ ನೇತೃತ್ವದ ತಜ್ಞರ ಸಮಿತಿಯಿಂದ ರಾಜ್ಯ ಸರ್ಕಾರಕ್ಕೆ ವರದಿ

• ಕೆ.ಎಂ. ಸಂತೋಷ್‌ಕುಮಾರ್

ಮುಖ್ಯಾಂಶಗಳು

- ಮೊದಲು ಸೌಕರ್ಯ ಮತ್ತು ಸಿಬ್ಬಂದಿ ಒದಗಿಸಿ
- ಒಂದೇ ಸ್ಥಳದಲ್ಲಿ ಬಹುವಿಷಯಗಳ ಪರಿಣತಿ ಸಿಗಲಿ
- ಕೃಷಿ ವಿ.ವಿ., ಅಧ್ಯಾಪಕರು, ವಿದ್ಯಾರ್ಥಿಗಳಿಂದ ಅಭಿಪ್ರಾಯ ಸಂಗ್ರಹ

ಮೈಸೂರು: ರಾಜ್ಯದಲ್ಲಿ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆ ಸಂಬಂಧ ತಜ್ಞರ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಕೃಷಿ ವಿಶ್ವವಿದ್ಯಾಲಯಗಳ ಸಮಗ್ರೀಕರಣ ಮತ್ತು ಪುನರ್ ಸಂಯೋಜನೆಯನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ಶಿಫಾರಸು ಮಾಡಿದೆ.

ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆ ಸಾಧ್ಯತೆ ಕುರಿತು ಪರಿಶೀಲಿಸಲು ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ ಭಾಸ್ಕರ್ ಅವರ ಅಧ್ಯಕ್ಷತೆಯಲ್ಲಿ ಸರ್ಕಾರ ತಜ್ಞರ ಸಮಿತಿ ರಚಿಸಿತ್ತು. ಈ ಸಮಿತಿ ಮೂರು ದಿನದ ಹಿಂದೆಯಷ್ಟೇ ವರದಿ ಸಲ್ಲಿಸಿದೆ.

ಮೊದಲ ಹಂತದಲ್ಲಿ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಕೃಷಿ ವಿಷಯಗಳನ್ನೊಳಗೊಂಡ ಕೃಷಿ-ತೋಟಗಾರಿಕೆ ವಿಶ್ವವಿದ್ಯಾಲಯಗಳನ್ನು ಜಿಲ್ಲಾವಾರು ವ್ಯಾಪ್ತಿಯೊಳಗೆ 'ಆರು ಸಮಗ್ರ ಕೃಷಿ ವಿಶ್ವವಿದ್ಯಾಲಯ'ಗಳಾಗಿ ಸಂಯೋಜಿಸಲು ತಜ್ಞರು ಶಿಫಾರಸು ಮಾಡಿದ್ದಾರೆ.

ಎರಡನೇ ಹಂತದಲ್ಲಿ, ಭಾರತೀಯ ಪಶುವೈದ್ಯಕೀಯ ಮಂಡಳಿ (ವಿಸಿಐ) ಮಾನದಂಡಗಳ ಪ್ರಕಾರ, ಮೂಲಸೌಕರ್ಯ, ಬೋಧಕ ಸಿಬ್ಬಂದಿ ಒದಗಿಸಿದ ನಂತರ, ಪುನರ್ ರಚಿಸುವ ವಿಶ್ವವಿದ್ಯಾಲಯಗಳ ಜೊತೆಗೇ ಪಶುವೈದ್ಯಕೀಯ, ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ವಿಜ್ಞಾನ ಕಾಲೇಜುಗಳನ್ನು ಸಮಗ್ರೀಕರಿಸಬಹುದು ಎಂದು ಸಲಹೆ ಮಾಡಿದೆ.

ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆಯು ರಾಜ್ಯದಲ್ಲಿ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಯನ್ನು ಬಲಪಡಿಸುವ ದಿಕ್ಕಿನಲ್ಲಿ ಮಹತ್ವಪೂರ್ಣ ಹೆಜ್ಜೆಯಾಗಲಿದೆ. ರೈತರಿಗೆ ಆಧುನಿಕ ಕೃಷಿ ಪದ್ಧತಿಯ ಸವಾಲುಗಳಿಗೂ ಇದರಿಂದ ಸಮಗ್ರ ಪರಿಹಾರ ಸಿಗಲಿದೆ. ಆಧುನಿಕ ಕೃಷಿಯಲ್ಲಿ ರೈತರ ಆದಾಯ ಸುಧಾರಿಸಲು ಮತ್ತು ಮೆಚ್ಚ ತಗ್ಗಿಸಲು ಒಂದೇ ಸ್ಥಳದಲ್ಲಿ ಬಹು-ವಿಷಯಗಳ ಪರಿಣತಿ ಒದಗಿಸುವ ಅಗತ್ಯವಿದೆ ಎಂದು ತಜ್ಞರ ಸಮಿತಿ ಪ್ರತಿಪಾದಿಸಿದೆ.

ತಜ್ಞರ ಸಮಿತಿ ಈ ವರ್ಷದ ಏಪ್ರಿಲ್‌ನಿಂದ ಜೂನ್‌ವರೆಗೆ ರಾಜ್ಯದ ಎಲ್ಲ ಕೃಷಿ ವಿ.ವಿ.ಗಳು, 18 ಮಹಾವಿದ್ಯಾಲಯಗಳು, 16 ಕೃಷಿ ಸಂಶೋಧನಾ ಕೇಂದ್ರಗಳು, 11 ಕೃಷಿ ವಿಜ್ಞಾನ ಕೇಂದ್ರಗಳಿಗೆ (ಕೆವಿಕೆ) ಭೇಟಿ ನೀಡಿ, 2600ಕ್ಕೂ ಹೆಚ್ಚು ವಿದ್ಯಾರ್ಥಿಗಳು, 900 ಅಧ್ಯಾಪಕರು, 350 ರೈತರು, 38 ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿತ್ತು. ಕುಲಪತಿಗಳು, ವಿಶ್ರಾಂತ ಕುಲಪತಿಗಳು, ಇಲಾಖಾ ಕಾರ್ಯದರ್ಶಿಗಳೊಂದಿಗೂ ಚರ್ಚಿಸಿತ್ತು.

ಕೇರಳ, ತಮಿಳುನಾಡು ಸೇರಿ ಹಲವು ರಾಜ್ಯಗಳಲ್ಲಿ ಕೃಷಿ-ತೋಟಗಾರಿಕೆ ವಿಶ್ವವಿದ್ಯಾಲಯಗಳು ಒಟ್ಟಿಗೆ ಇವೆ. ನಮ್ಮಲ್ಲೂ ಒಂದೇ ಸೂರಿನಡಿ ತರಲು ಹೇಳಿದ್ದೇವೆ. ಇದರಿಂದ ಸರ್ಕಾರ, ರೈತರು, ವಿದ್ಯಾರ್ಥಿಗಳಿಗೆ ಅನುಕೂಲ

ಟಿ.ಎಂ. ವಿಜಯ ಭಾಸ್ಕರ್
ತಜ್ಞರ ಸಮಿತಿ ಅಧ್ಯಕ್ಷ

ದೇಶದಲ್ಲಿ ಭೂ ಹಿಡುವಳಿ ಕಡಿಮೆ ಇದೆ. ಏಕ ಬೆಳೆ ನಂಬಲಾಗದು. ಸಮಗ್ರ ಕೃಷಿ ಅನಿವಾರ್ಯವಾಗಿದೆ. ರೈತರಿಗೆ ಒಂದೇ ಸೂರಿನಡಿ ಸಮಗ್ರ ಮಾಹಿತಿ ಕಲ್ಪಿಸಲು ಅಂಥ ವಿಶ್ವವಿದ್ಯಾಲಯಗಳು ಇರಬೇಕು

ಎಸ್.ವಿ. ಸುರೇಶ್
ಸಮಿತಿ ಸಂಚಾಲಕ, ಕುಲಪತಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ

ಪ್ರಮುಖ ಶಿಫಾರಸುಗಳು

- ಪ್ರತಿ ಸಮಗ್ರ ವಿಶ್ವವಿದ್ಯಾಲಯದಲ್ಲಿ ವಿಶೇಷ ತೋಟಗಾರಿಕೆ ವಿಭಾಗಗಳನ್ನು ರಚಿಸಬೇಕು
- ಬೆಳೆ, ನಿರ್ದಿಷ್ಟ-ವಿಷಯ ಸಂಶೋಧನೆಗೆ ಸಂಶೋಧನಾ ಕೇಂದ್ರ ಸ್ಥಾಪಿಸಿ
- ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ವಿಸ್ತರಣಾ ಘಟಕಗಳನ್ನು ಬಹು ವಿಷಯಗಳ ರೈತ ತರಬೇತಿ ಕೇಂದ್ರಗಳನ್ನಾಗಿಸಬೇಕು
- ಕೃಷಿ, ತೋಟಗಾರಿಕೆ, ಪಶು ಸಂಗೋಪನಾ ಇಲಾಖೆಗಳ ಜಂಟಿ ಮೇಲ್ವಿಚಾರಣೆಯಲ್ಲಿ ಸಮನ್ವಯ ಬಲಪಡಿಸಬೇಕು

ಬಾಹ್ಯಾಕಾಶ ಕೃಷಿಗೆ ಧಾರವಾಡ ಕೃಷಿ ವಿವಿ ಮುನ್ನುಡಿ

ಬಾಹ್ಯಾಕಾಶ ಕೃಷಿ ಸಂಶೋಧನೆಗೆ ಸ್ವಾಯತ್ತ ಘಟಕ ಸ್ಥಾಪಿಸುವಂತೆ ಇಸ್ರೋಗೆ ಮನವಿ ಸಲ್ಲಿಸಲು ಕೃಷಿ ವಿವಿ ಸಜ್ಜು

ಇಸ್ರೋ ಗಗನಯಾನ ಸಂಶೋಧನೆಗೆ ಎಲ್ಲ ಪೌಷ್ಟಿಕ ಆಹಾರ ಧಾನ್ಯಗಳ ಪೂರೈಸಲು ಕೂಡ ಸಿದ್ಧ ಎಂದ ಕೃಷಿ ವಿವಿ

■ ಬಸವರಾಜ್ ಹೊಂಗಲ್

ಉದಯವಾಣಿ ಸಮಾಚಾರ

ಧಾರವಾಡ: ಬಾಹ್ಯಾಕಾಶಕ್ಕೆ ಹೆಸರು ಮತ್ತು ಮೆಂತ್ಯೆ ಕಾಳು ಕಳುಹಿಸಿ ಫಲದಾಯಕ ಫಲಿತಾಂಶ ಪಡೆದು ಗಮನ ಸೆಳೆದಿರುವ ಧಾರವಾಡ ಕೃಷಿ ವಿಶ್ವವಿದ್ಯಾಲಯ ಗಗನಯಾನಕ್ಕೆ ಹಣ್ಣು ನೊಣ(ಫ್ರುಟ್ಸ್ ಫ್ಲೈ)ಗಳನ್ನು ಕಳುಹಿಸುವುದಕ್ಕೆ ಪರಿಪೂರ್ಣ ಸಿದ್ಧತೆ ಮಾಡಿಕೊಂಡಾಗಿದೆ. ಇದರಿಂದ ಉತ್ತೇಜಿತಗೊಂಡಿರುವ ಕೃಷಿ ವಿವಿ ಒಂದು ಹೆಜ್ಜೆ ಮುಂದಿಟ್ಟು ಬಾಹ್ಯಾಕಾಶ ಕೃಷಿ ಸಂಶೋಧನೆಗೆ ಸ್ವಾಯತ್ತ ಘಟಕ ಸ್ಥಾಪಿಸುವಂತೆ ಇಸ್ರೋಗೆ ಮನವಿ ಸಲ್ಲಿಸಲು ಸಜ್ಜಾಗಿದೆ. ಹೌದು. ಮೂರು ತಿಂಗಳ ಹಿಂದೆ ಬಾಹ್ಯಾಕಾಶಕ್ಕೆ ನೆಗೆದಿದ್ದ ಧಾರವಾಡ ನೆಲದ ಹೆಸರು-ಮೆಂತ್ಯೆ ಕಾಳು ಧಾರವಾಡ ಕೃಷಿ ವಿವಿಗೆ ಮರಳಿ ತಲುಪಿದ್ದು ಫಲದಾಯಕ ಫಲಿತಾಂಶ ದಾಖಲಾಗಿದೆ ಎಂದು ವಿಜ್ಞಾನಿಗಳು ಹರ್ಷ ಗೊಂಡಿದ್ದಾರೆ. ಇದೇ ಉತ್ಸಾಹದಿಂದ ಕೃಷಿ ವಿವಿ ಇಸ್ರೋ ಗಗನಯಾನ ಸಂಶೋಧನೆಗೆ ಅಗತ್ಯವಾದ ಎಲ್ಲ ಪೌಷ್ಟಿಕ ಆಹಾರ ಧಾನ್ಯಗಳನ್ನು ಪೂರೈಸಲು ಕೂಡ ಸಿದ್ಧ ಎಂದಿದೆ.

ಆಗೊಮ್ಮೆ ಈಗೊಮ್ಮೆ ಸಂಶೋಧನೆ ನಡೆಸುವ ಬದಲು ಬಾಹ್ಯಾಕಾಶ ಕೃಷಿ 'ಸಂಶೋಧನಾ ಸ್ವಾಯತ್ತ ಘಟಕ' ತೆರೆಯಲು ಮುಂದಾಗಿರುವ ಕೃಷಿ ವಿವಿ, ಈ ನಿಟ್ಟಿನಲ್ಲಿ ಇಸ್ರೋ ಜತೆ ಶೀಘ್ರವೇ ಒಪ್ಪಂದ ಮಾಡಿಕೊಳ್ಳುವ ಇಂಗಿತ ವ್ಯಕ್ತಪಡಿಸಿದೆ.

▸ 8ನೇ ಪುಟಕ್ಕೆ

ಧಾರವಾಡದಲ್ಲೇ ಏಕೆ?

- 'ನಾಸಾ' ಜೊತೆಗೆ ಕೆಲಸ ಮಾಡಿದ ನುರಿತ ವಿಜ್ಞಾನಿಗಳು ದೇಶದ 75 ಕೃಷಿ ವಿವಿಗಳ ಪೈಕಿ ಎಲ್ಲಿಯೂ ಇಲ್ಲ.
- ಧಾರವಾಡ ಕೃಷಿ ವಿವಿ ಜೈವಿಕ ವಿಭಾಗದಲ್ಲಿ ಮಾತ್ರ ಬಾಹ್ಯಾಕಾಶ, ಕೃಷಿ ಎರಡನ್ನು ಒಟ್ಟೊಟ್ಟಿಗೆ ಅಧ್ಯಯನ ಮಾಡಿದ ನುರಿತ ವಿಜ್ಞಾನಿಗಳಿದ್ದಾರೆ.
- ಸಂಶೋಧನೆ, ಗುಣಾತ್ಮಕ ಫಲಿತಾಂಶಗಳ ಆಧಾರದಲ್ಲಿ ಧಾರವಾಡ ಕೃಷಿ ವಿವಿ ದೇಶದ ಟಾಪ್ 5 ವಿವಿಗಳ ಪಟ್ಟಿಯಲ್ಲಿದೆ.
- ಬಾಹ್ಯಾಕಾಶ ಕೃಷಿ ಸಂಶೋಧನೆ ಘಟಕ ಸ್ಥಾಪನೆಯಾದರೆ ಬೆಂಗಳೂರು ಇಸ್ರೋ ಕೇಂದ್ರದ ಜೊತೆ ಒಡನಾಡಲು ಸಾಕಷ್ಟು ಅವಕಾಶವಾಗಲಿದೆ



ಬಾಹ್ಯಾಕಾಶದಲ್ಲಿ ಮೊಳಕೆಯೊಡೆದ ಹೆಸರು-ಮೆಂತ್ಯ

ಮತ್ತಷ್ಟು ಕೊಡುಗೆ ಸಾಧ್ಯ

ಬಾಹ್ಯಾಕಾಶ ಕೃಷಿ ಮುಂದಿನ ದಿನಗಳಲ್ಲಿ ಇಡೀ ಜಗತ್ತಿಗೆ ಬೇಕು. ಧಾರವಾಡ ಕೃಷಿ ವಿವಿಯಲ್ಲಿ ಸ್ವಾಯತ್ತ ಘಟಕ ಸ್ಥಾಪಿಸಿದರೆ ಇನ್ನಷ್ಟು ಕೊಡುಗೆ ನೀಡಲು ನಮ್ಮ ಕೃಷಿ ವಿಜ್ಞಾನಿಗಳು ಸಜ್ಜಾಗಿದ್ದಾರೆ.

● **ಡಾ.ಪಿ.ಎಲ್. ಪಾಟೀಲ್,** ಕುಲಪತಿ-ಧಾರವಾಡ ಕೃಷಿ ವಿಶ್ವವಿದ್ಯಾಲಯ

Udayavani Pg 01

ಬಾಹ್ಯಾಕಾಶ ಕೃಷಿಗೆ ಧಾರವಾಡ ಕೃಷಿ ವಿವಿ ಮುನ್ನುಡಿ

1ನೇ ಪುಟದಿಂದ ▸ **ಬಾಹ್ಯಾಕಾಶ ಕೃಷಿ ಸ್ವಾಯತ್ತತೆ ಯಾಕೆ?:** ಆತ್ಮನಿರ್ಭರತೆ ಕೇವಲ ಆಟೋಮೊಬೈಲ್ ಮತ್ತು ಇತರೆ ತಾಂತ್ರಿಕ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಬಾಹ್ಯಾಕಾಶ ಕ್ಷೇತ್ರದಲ್ಲೂ ಭಾರತ ಚಂದ್ರಯಾನ ಯಶಸ್ಸಿನ ಮೂಲಕ ತೋರಿಸಿಕೊಟ್ಟಿದೆ. ಈಗ ಇಸ್ರೋ ನಡೆಸುತ್ತಿರುವ ಹತ್ತು ಹಲವಾರು ಪ್ರಯೋಗಗಳಿಗೆ ಬಾಹ್ಯಾಕಾಶ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಬೆಳವಣಿಗೆ ಹೊಂದಬೇಕಿದೆ. ಇಲ್ಲಿಯವರೆಗೆ ಬರೀ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ)ಗಳಿಂದ ಮಾತ್ರ ಪ್ರಯೋಗ ಮಾದರಿ ತರಿಸಿಕೊಳ್ಳುತ್ತಿದ್ದ ಇಸ್ರೋ ಎದುರು ಇದೇ ಮೊದಲ ಬಾರಿಗೆ ಧಾರವಾಡ ಕೃಷಿ ವಿವಿ ತನ್ನ ಸಂಶೋಧನಾ ಸಾಮರ್ಥ್ಯವನ್ನು ಪ್ರದರ್ಶಿಸಿ ಯಶಸ್ವಿಯಾಗಿದೆ. ಹೀಗಾಗಿ ಮಾನವ ಸಂಪನ್ಮೂಲ ಮತ್ತು ಸಂಶೋಧನಾ ಜ್ಞಾನ ಬಳಕೆ ನಿಟ್ಟಿನಲ್ಲಿ ಬಾಹ್ಯಾಕಾಶ ಕೃಷಿ ಸ್ವಾಯತ್ತ ಘಟಕದ ಅಗತ್ಯವಿದೆ ಎನ್ನುತ್ತಿದ್ದಾರೆ ಇಲ್ಲಿನ ಕೃಷಿ ವಿಜ್ಞಾನಿಗಳು.

ಧಾರವಾಡದಲ್ಲೇ ಯಾಕೆ ಸಾಧ್ಯ?: ಅಮೆರಿಕದ 'ನಾಸಾ' ಜೊತೆಗೆ ಕೆಲಸ ಮಾಡಿದ ನುರಿತ ವಿಜ್ಞಾನಿಗಳು ಇಡೀ ದೇಶದ 75 ಕೃಷಿ ವಿವಿಗಳ ಪೈಕಿ ಎಲ್ಲಿಯೂ ಇಲ್ಲ. ಆದರೆ, ಧಾರವಾಡ ಕೃಷಿ ವಿವಿ ಜೈವಿಕ ವಿಭಾಗದಲ್ಲಿ ಮಾತ್ರ ಬಾಹ್ಯಾಕಾಶ ಮತ್ತು ಕೃಷಿ ಎರಡನ್ನು ಒಟ್ಟೊಟ್ಟಿಗೆ ಅಧ್ಯಯನ ಮಾಡಿದ ನುರಿತ ವಿಜ್ಞಾನಿಗಳಿದ್ದಾರೆ. ಹೀಗಾಗಿ ಇಲ್ಲಿ ಬಾಹ್ಯಾಕಾಶ ಕೃಷಿ ಅಧ್ಯಯನಕ್ಕೆ ಹೆಚ್ಚಿನ ಅವಕಾಶ ಗಳಿವೆ. ಅಷ್ಟೇ ಅಲ್ಲ, ಸಂಶೋಧನೆ ಮತ್ತು ಗುಣಾತ್ಮಕ ಫಲಿತಾಂಶಗಳ ಆಧಾರದಲ್ಲಿ ಧಾರವಾಡ ಕೃಷಿ ವಿವಿ ದೇಶದ ಟಾಪ್ ಐದು ವಿವಿಗಳ ಪಟ್ಟಿಯಲ್ಲಿದೆ. ಪಕ್ಕದಲ್ಲಿಯೇ ಧಾರವಾಡ ಐಐಟಿ ಇದೆ. ಬಾಹ್ಯಾಕಾಶ ಕೃಷಿ ಸಂಶೋಧನೆ ಘಟಕ ಇಲ್ಲಿ ಸ್ಥಾಪನೆಯಾದರೆ ಬೆಂಗಳೂರು ಇಸ್ರೋ ಕೇಂದ್ರದ ಜೊತೆ ಒಡನಾಡಲು ಸಾಕಷ್ಟು ಅವಕಾಶವಿದೆ.

ಗಗನಯಾನಕ್ಕೆ ಸಜ್ಜಾದ ನೊಣಗಳ ಕಿಟ್

ಗಗನಯಾನಿಗಳ ಆಂಗರಚನೆ ಕಿಡ್ನಿ ಕಾರ್ಯಗಳ ಅಧ್ಯಯನಕ್ಕೆ ಧಾರವಾಡ ಕೃಷಿ ವಿವಿ ರಚಿಸಿರುವ ಹಣ್ಣಿನ ನೊಣಗಳ ಕಿಟ್ ಕೂಡ 2025ರ ಡಿಸೆಂಬರ್ ಅಥವಾ 2026ರ ಜನವರಿಯಲ್ಲಿ ಏಳು ದಿನಗಳ ಕಾಲ ಬಾಹ್ಯಾಕಾಶದಲ್ಲಿ ಸುತ್ತಿ ಭೂಮಿಗೆ ಬರಲಿದೆ. ಈ ಸಂಬಂಧ ಈಗಾಗಲೇ ಇಸ್ರೋಗೆ ಧಾರವಾಡದ ನೊಣದ ಕಿಟ್ ಮಾದರಿ ತಲುಪಿದ್ದು ಅಧ್ಯಯನಕ್ಕೆ ಒಳಪಡುವ ಮೂಲ ಮಾದರಿಯ ಕಿಟ್‌ನ್ನು ಕೂಡ ಕೃಷಿ ವಿವಿಯ ವಿಜ್ಞಾನಿಗಳು ಸಜ್ಜುಗೊಳಿಸಿದ್ದಾರೆ.

> ಅಮೆರಿಕಾದ 'ನಾಸಾ'ದಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದೇನೆ. ಬಾಹ್ಯಾಕಾಶ ಕೃಷಿಗೆ ಧಾರವಾಡ ಕೃಷಿ ವಿವಿ ಉತ್ತಮ ಕೊಡುಗೆ ನೀಡಲು ಸಾಕಷ್ಟು ಅವಕಾಶಗಳಿದ್ದು, ಇದನ್ನು ದೇಶ ಬಳಸಿಕೊಳ್ಳಬೇಕಿದೆ.
> ● ಡಾ।ರವಿಕುಮಾರ್ ಹೊಸಮನಿ, ನಾಸಾ'ದ ಮಾಜಿ ವಿಜ್ಞಾನಿ.

Udayavani Pg 01

Coming soon, lemon tea ...

Lemon, from Page 1

The board has already identified new locations in Bengaluru and Vijayapura for expansion.

Local farmer Tammanna Pujari believes the initiative will be a game-changer. "Lemon tea is said to help improve health. A proper awareness campaign will definitely give a fillip to the growers," he said.

Pujari, who has cultivated lemons for over four decades, said his eight-acre farm yields 10 quintals every week. Farmers in his village supply around 100 tonnes of lemons daily to various parts of the country. "One batch of lemon growers has already received training from CFTRI in Mysuru. We have earmarked funds to train around 1,000 members of the farmer producer organisation engaged in lemon farming," said KSLDB's Patil. Indi MLA Yashvantrayagouda Patil said that the tea outlet at Indi Mini Vidhana Soudha will be expanded to other districts.

"We are constructing cold storages to facilitate lemon growers and are actively looking for marketplaces to start more tea points. The board has adequate funds to create awareness," he said.

Vijayapura district produces 80% of Karnataka's total lemon output but has seen a 30% decline in recent years due to water scarcity, prompting many farmers to switch to less water-intensive crops. Karnataka ranks fourth in lemon production after Andhra Pradesh, Gujarat and Maharashtra.

Dec Hhrd Pg 01

Coming soon, tea outlets powered by Kagzi lemon

DH SPECIAL

VITTAL SHASTRI
KALABURAGI, DHNS

SIP THE DIFFERENCE

Karnataka lime board wants to model lemon tea outlets after KMF's Nandini

- These outlets will offer by-products such as lemon powder sachets, juice and pickles
- The move is expected to bring in much-needed revenue for both board and local farmers
- Kagzi lemon is known for its thin rind, abundant juice and high ascorbic acid content



Customers will soon be able savour the goodness and unique flavour of Kagzi lemon at scores of lemon tea outlets across Karnataka.

The Karnataka State Lime Development Board (KSLDB) plans to open outlets to popularise lemon tea on the lines of Darjeeling and Assam teas, as it looks to cash in on Geographical Indication (GI) tag granted to the lemon grown in Indi taluk of Vijayapura district.

The board wants to model the outlets after the Karnataka Milk Federation's Nandini. Alongside tea, the outlets will offer by-products such as lemon powder sachets, juice and pickles. The move is expected to bring in much-needed revenue for both the board and local farmers, many of whom have suffered crop losses due to extreme weather events in recent years.

"We will adopt Karnataka Milk Federation bylaws in opening the lemon tea points at crowded public places, including bus stands, railway stations and airports across the state," said H S Patil, Managing Director of KSLDB. The board is off to an auspicious start as its pilot lemon tea point in Indi town in July received an overwhelming public response.

Known for its thin rind, abundant juice and high ascorbic acid content, Kagzi lemon has seen a spike in demand across the country, and is now being exported to Australia and the UAE. Encouraged by the success of the pilot, more than 10 individuals have come forward to open similar tea points across Vijayapura district.

▸ Lemon, Page 5

ಸ್ವಂತ ಜಮೀನಿನ ಜತೆ ಗುತ್ತಿಗೆ ಭೂಮಿಯಲ್ಲಿ ಕೃಷಿ ವಿಸ್ತರಣೆ | ಉತ್ತಮ ದರವಿದ್ದರೆ ಎಕರೆಗೆ ಕನಿಷ್ಠ 4-5 ಲಕ್ಷ ರೂ. ಲಾಭ

ದಾಳಿಂಬೆ ಬೆಳೆಯತ್ತ ಯುವ ರೈತರ ಚಿತ್ತ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ಬೆಂಗಳೂರು ನಗರದ ಹೊರವಲಯದಲ್ಲಿ ರಿಯಲ್ ಎಸ್ಟೇಟ್ ದಂಧೆಯ ನಡುವೆ ಜಮೀನು ಉಳಿಸಿಕೊಳ್ಳುವುದೇ ಸವಾಲಾಗಿದೆ. ಹೀಗಿರುವಾಗ ರಾಜಾನುಕುಂಟೆ ಹಾಗೂ ಸುತ್ತಮುತ್ತ ತಮ್ಮ ಭೂಮಿಯ ಜತೆಗೆ ಮತ್ತಷ್ಟು ಭೂಮಿಯನ್ನು ಗುತ್ತಿಗೆಗೆ ಪಡೆದು ಅತ್ಯಂತ ಲಾಭದಾಯಕವಾದ ದಾಳಿಂಬೆ ಬೆಳೆ ಬೆಳೆಯುವ ಮೂಲಕ ಯುವ ರೈತರು ಹಲವರಿಗೆ ಮಾದರಿಯಾಗಿದ್ದಾರೆ.

ಅಧಿಕ ಮೆಚ್ಚ ಹೆಚ್ಚಿನ ಶ್ರಮ ವಹಿಸಿ ದ್ರಾಕ್ಷಿ ಬೆಳೆದರೂ ಹೆಚ್ಚಿನ ಆದಾಯ ಕಾಣದ ಹಿನ್ನೆಲೆಯಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ನೂರಾರು ರೈತರು, ಉತ್ತಮ ಆದಾಯ ತಂದುಕೊಡಬಲ್ಲ ದಾಳಿಂಬೆಯತ್ತ ಹೊರಳಿದ್ದಾರೆ. ಆ ಮೂಲಕ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ಪಡೆದು ಉತ್ತಮ ಲಾಭ ಗಳಿಸುತ್ತಿದ್ದಾರೆ. ಬೆಂಗಳೂರು ಉತ್ತರ ತಾಲೂಕಿನ ನಾಗದಾಸಹಳ್ಳಿಯ ಎನ್.ಆರ್. ಚಂದ್ರ ಅಂತಹ ರೈತರಲ್ಲೊಬ್ಬರಾಗಿದ್ದಾರೆ. 32 ವಯಸ್ಸಿನ ಚಂದ್ರ ಅವರು ಬೆಂಗಳೂರು ಬ್ಲೂ ದ್ರಾಕ್ಷಿಯ ಜತೆಗೆ ವೈಜ್ಞಾನಿಕ ರೀತಿಯಲ್ಲಿ ದಾಳಿಂಬೆ ಬೆಳೆಯನ್ನೂ ಬೆಳೆದು ಯಶಸ್ಸು ಕಂಡಿದ್ದಾರೆ. ಹಲವರಿಗೆ ಉದ್ಯೋಗವನ್ನೂ ಕೊಟ್ಟಿದ್ದಾರೆ.

27 ಎಕರೆಯಲ್ಲಿ ದಾಳಿಂಬೆ: ಚಂದ್ರ ಅವರು ಹತ್ತು ವರ್ಷಗಳಿಂದ ದಾಳಿಂಬೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಸದ್ಯ, ರಾಜಾನುಕುಂಟೆ ಬಳಿ ಏಳು ಎಕರೆ ಸ್ವಂತ ಜಾಗದಲ್ಲಿ ಹಾಗೂ ದೊಡ್ಡಬಳ್ಳಾಪುರ ಬಳಿಯ ಅಲ್ಲೀಪುರ 18 ಎಕರೆ ಗುತ್ತಿಗೆ ಪಡೆದು ದಾಳಿಂಬೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಹಣ್ಣಿನ ಸೀಸನ್‌ನಲ್ಲಿ ರೈತರಿಗೆ ಕೆ.ಜಿ.ಗೆ ಕನಿಷ್ಠ 100 ರೂ. ದರ ಸಿಕ್ಕರೆ ಎಕರೆಗೆ ಕನಿಷ್ಠ 4-5 ಲಕ್ಷ ರೂ. ಲಾಭ ಬರುತ್ತದೆ ಎನ್ನುತ್ತಾರೆ ಚಂದ್ರ ಅವರು.

ಆರಂಭದಲ್ಲಿ ಹೆಚ್ಚು ಖರ್ಚು: ನಾಟಿ ಮಾಡುವಾಗಲೇ ಗಿಡದಿಂದ ಗಿಡಕ್ಕೆ ಅಂತರ ಕಾಪಾಡಿಕೊಳ್ಳಬೇಕು. ಗಿಡಗಳ ಮಧ್ಯೆ ಗಾಳಿ, ಬೆಳಕು ಇರಬೇಕು. ಗಿಡಗಳಿಗೆ ನಿಗದಿತ ಅವಧಿಗೆ ಕೊಡಬೇಕಾದ ಪೋಷಕಾಂಶ, ರಸಗೊಬ್ಬರವನ್ನು ಸಮೃದ್ಧವಾಗಿ ನೀಡಬೇಕು. ಕಾಲಕಾಲಕ್ಕೆ ಔಷಧೋಪಚಾರ ಮಾಡಿ ನಿರ್ವಹಣೆ ಮಾಡುವುದು ಮುಖ್ಯ. ನಾಟಿ ಮಾಡಿದ ಮೊದಲ ವರ್ಷ 1100-2000 ರೂ. ಖರ್ಚು ಬಂದರೆ, ಎರಡನೇ ವರ್ಷ ಒಂದು ಗಿಡಕ್ಕೆ 600-700 ರೂ. ಖರ್ಚು ಬರುತ್ತದೆ ಎನ್ನುತ್ತಾರೆ ಚಂದ್ರ.



ದಾಳಿಂಬೆಯ ತೋಟದಲ್ಲಿ ರೈತ ಎನ್.ಆರ್. ಚಂದ್ರು.



ತೋಟಕ್ಕೇ ಬಂದು ಖರೀದಿ

ಬಾಂಗ್ಲಾ, ಚೆನ್ನೈ, ಮುಂಬೈ ಮತ್ತಿತರ ಭಾಗಗಳಿಂದ ಅಲ್ಲಿನ ವ್ಯಾಪಾರಿಗಳೇ ಬಂದು ತೋಟದಲ್ಲಿಯೇ ಖರೀದಿಸಿ ಹೋಗುತ್ತಾರೆ. ಹೀಗಾಗಿ, ಚಂದ್ರು ಅವರಿಗೆ ಸಾಗಾಟದ ಸಮಸ್ಯೆಯೂ ಇಲ್ಲ.

> ನಮ್ಮ ತಾತ, ತಂದೆಯವರು ಕೂಡ ಕೃಷಿಯಲ್ಲಿ ತೊಡಗಿದ್ದರು. ನನಗೂ ಚಿಕ್ಕಂದಿನಿಂದಲೂ ಕೃಷಿಯಲ್ಲಿ ತುಂಬಾ ಆಸಕ್ತಿ. ಹೀಗಾಗಿ ಎಸ್ಸೆಸ್ಸೆಲ್ಸಿ ಬಳಿಕ ನಾನು ಕೃಷಿಯನ್ನೇ ನೆಚ್ಚಿಕೊಂಡೆ. ಅದು ನನ್ನ ಕೈ ಹಿಡಿಯಿತು. ಕೃಷಿ ನನಗೆ ಅತ್ಯಂತ ತೃಪ್ತಿಯನ್ನೂ ನೀಡಿದೆ.
> – ಎನ್.ಆರ್. ಚಂದ್ರ, ನಾಗದಾಸಹಳ್ಳಿ, ಬೆಂಗಳೂರು ಉತ್ತರ

ಮೂರು ಸಾಲು ಹನಿ ನೀರಾವರಿ

ದಾಳಿಂಬೆ ಬೆಳೆಗೆ ಮೂರು ಸಾಲು ಡ್ರಿಪ್ ಅಳವಡಿಸಲಾಗಿದೆ. ಒಂದು ಲೈನ್ ಸಸಿಗಳಿದ್ದರೆ, ಅದರ ಅಕ್ಕ ಪಕ್ಕದಲ್ಲಿಯೂ ತಲಾ ಒಂದೊಂದು ಸಾಲು ಹನಿ ನೀರಾವರಿ ಪೈಪ್ ಅಳವಡಿಸಲಾಗಿದೆ. ಏಕೆಂದರೆ ಗಿಡದ ಬೇರು ವರ್ಷ ಕಳೆದಂತೆ ವಿಸ್ತರಣೆಯಾಗಿರುತ್ತದೆ. ಹೀಗಾಗಿ, ವಿಸ್ತರಣೆಯಾದ ಬೇರುಗಳಿಗೂ ನೀರು ಬೇಕು. ಜತೆಗೆ, ಶೇ.80ರಷ್ಟು ರಸಗೊಬ್ಬರವನ್ನು ಹನಿ ನೀರಾವರಿ ಪೈಪ್‌ಗಳ ಮೂಲಕವೇ ನೀಡಲಾಗುತ್ತದೆ. ದಾಳಿಂಬೆಗೆ ಬೇಸಿಗೆಯಲ್ಲಿ ಕೀಟಬಾಧೆಗಳು ಹೆಚ್ಚು, ಮಳೆಗಾಲದಲ್ಲಿ ವೈರಸ್ ರೋಗಗಳು ಬಾಧಿಸುತ್ತವೆ.

ಮೋಡದ ವಾತಾವರಣದಿಂದ ದಾಳಿಂಬೆಗೆ ಆಪತ್ತು



''ಇತ್ತೀಚೆಗೆ ದಾಳಿಂಬೆ ಬೆಳೆಯ ವ್ಯಾಪ್ತಿ ಹೆಚ್ಚಾಗಿದ್ದು, ಕರ್ನಾಟಕದಲ್ಲಿ 75-80 ಸಾವಿರ ಎಕರೆಯಿದ್ದರೆ, ಬೆಂಗಳೂರು ಸುತ್ತಮುತ್ತ ಸುಮಾರು 9-10 ಎಕರೆ ವ್ಯಾಪ್ತಿಯಲ್ಲಿ ದಾಳಿಂಬೆ ಬೆಳೆಯಿದೆ. ದಾಳಿಂಬೆ ಹಣ್ಣಾಗುವ ಸಂದರ್ಭದಲ್ಲಿ ಬಿಸಿಲಿರಬೇಕು. ಈ ಬಾರಿ ರಾಜ್ಯಾದ್ಯಂತ ಮೋಡದ ವಾತಾವರಣ ಹೆಚ್ಚಾಗಿದೆ. ಇದರಿಂದ ದಾಳಿಂಬೆ ಬೆಳೆಗೆ ಮೂತಿಕೊಳೆ ರೋಗ, ಚುಕ್ಕೆರೋಗ, ಹಣ್ಣಿನ ಕೊಳೆ ರೋಗ, ದುಂಡಾಣು ರೋಗಗಳು ರೈತರನ್ನು ಬಾಧಿಸಿವೆ,'' ಎನ್ನುತ್ತಾರೆ ಸ್ಕಾಟ್ ಟಿಕ್ನಾಲಜಿ ಮುಖ್ಯಸ್ಥರು ಹಾಗೂ ಪ್ಲಾಂಟೇಷನ್ ಸಲಹೆಗಾರ ಡಾ. ಸುನೀಲ್ ತಮಗಾಳೆ.

V-karnataka Pg 06

ಕೆಂಪು ಪೇರಲ ಲಕ್ಷ ಲಕ್ಷ ಆದಾಯ

■ ವಿರೂಪಾಕ್ಷಯ್ಯ ಗುದ್ನಯ್ಯನವರಮಠ ಹುಬ್ಬಳ್ಳಿ

ಕೃಷಿ ಮತ್ತು ತೋಟಗಾರಿಕೆಯಲ್ಲಿ ಆಸಕ್ತಿ ಹೊಂದಿದ್ದ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಒಬ್ಬರು ಸುಧಾರಿತ ಹೊಸ ತಳಿ 'ರೆಡ್ ಡೈಮಂಡ್' ಪೇರಲ ಬೆಳೆದು ಲಕ್ಷಾಂತರ ರೂ. ಆದಾಯ ಗಳಿಸುತ್ತಿದ್ದಾರೆ. ಮೂಲತಃ ಗದಗ ಜಿಲ್ಲೆ ಗಜೇಂದ್ರಗಡ ತಾಲೂಕಿನ ಲಕ್ಕಲಕಟ್ಟಿ ಗ್ರಾಮದವರು, ಸದ್ಯ ಧಾರವಾಡದಲ್ಲಿರುವ ಕೃಷಿ ಪದವೀಧರ ಸಿ.ಕೆ. ರಾಜೂರ ಅವರು ಜಿಲ್ಲೆಯಲ್ಲಿ ಮೊದಲ ಬಾರಿಗೆ ಪೇರಲ ಬೆಳೆದು ಯಶ ಕಂಡಿದ್ದಾರೆ. ಧಾರವಾಡ ತಾಲೂಕಿನ ಸಲಕಿನಕೊಪ್ಪದಲ್ಲಿ 2012ರಲ್ಲಿ 4 ಎಕರೆ ಜಮೀನು ಖರೀದಿಸಿ ಕೃಷಿಯಲ್ಲಿ ತೊಡಗಿದ್ದಾರೆ. 2022ರ ಜುಲೈನಲ್ಲಿ ನಿವೃತ್ತಿ ಹೊಂದಿದ ಬಳಿಕ ಸಂಪೂರ್ಣವಾಗಿ ಸಮಗ್ರ ಕೃಷಿ ಮಾಡುತ್ತಿದ್ದಾರೆ.

2023ರ ಸೆಪ್ಟೆಂಬರ್‌ನಲ್ಲಿ ಗುಜರಾತ್‌ನಿಂದ ಸಾವಿರ ಸಸಿಗಳನ್ನು ತಂದು 2 ಎಕರೆಯಲ್ಲಿ 8/8 ಅಂತರದಲ್ಲಿ ನಾಟಿ ಮಾಡಿದ್ದು, ಹನಿ ನೀರಾವರಿ ಮಾಡಿಕೊಂಡಿದ್ದಾರೆ. 2024ರ ನವೆಂಬರ್‌ನಲ್ಲಿ ಮೊದಲ ಕಟಾವು ಮಾಡಿದ್ದು ಒಂದೂವರೆ ಟನ್ ಇಳುವರಿ ಬಂದಿತ್ತು. 2025ರ ಮಾರ್ಚ್- ಏಪ್ರಿಲ್‌ನಲ್ಲಿ 2ನೇ ಕಟಾವು ಮಾಡಿದ್ದು, 2 ಟನ್ ಇಳುವರಿ ಬಂದಿತ್ತು. ಆಗ ಕೆಜಿಗೆ 120 ರೂ. ಗಳಂತೆ ಮಾರಾಟ ಮಾಡಲಾಗಿದ್ದು 2.40 ಲಕ್ಷ ರೂ. ಆದಾಯ ಬಂದಿದೆ. 2025ರ ಸೆಪ್ಟೆಂಬರ್‌ನಲ್ಲಿ 3ನೇ ಕಟಾವು ಮಾಡಲಾಗುವುದು. ಸೆಪ್ಟೆಂಬರ್‌ನಲ್ಲಿ ಅಂದಾಜು 4 ಟನ್ ಇಳುವರಿ ಬರಲಿದ್ದು, 5 ಲಕ್ಷ ರೂಪಾಯಿ ಆದಾಯದ ನಿರೀಕ್ಷೆ ಇದೆ. ಗಿಡಗಳು ನಾಲ್ಕು ವರ್ಷದ ನಂತರ ವರ್ಷಕ್ಕೆ ಎರಡು ಬಾರಿ ಇಳುವರಿ ನೀಡುತ್ತವೆ. ಆಗ ಪ್ರತಿ ಗಿಡದಿಂದ 25ರಿಂದ 30 ಕೆಜಿ ಲೆಕ್ಕದಲ್ಲಿ 25 ಟನ್ ಇಳುವರಿ ಬರುತ್ತದೆ. ಪ್ರತಿ ಕೆಜಿಗೆ 120 ರೂ.ನಂತೆ ಮಾರಾಟ ಮಾಡಿದರೆ, 30 ಲಕ್ಷ ರೂ. ಆದಾಯ ಬರುವ ನಿರೀಕ್ಷೆ ಇದೆ. ಅದರಲ್ಲಿ ನಿರ್ವಹಣೆ ಖರ್ಚು 15 ಲಕ್ಷ ರೂ. ಖರ್ಚು ಕಳೆದು 15 ಲಕ್ಷ ರೂ.ವರೆಗೆ ಆದಾಯ ಗಳಿಸಬಹುದು.

- ಧಾರವಾಡದಲ್ಲಿ ಮೊದಲ ಪ್ರಯೋಗ
- ನಿವೃತ್ತ ಅಧಿಕಾರಿಯ ಸಮಗ್ರ ಕೃಷಿ ಪ್ರೇಮ

ಕೀಟಬಾಧೆ ರಕ್ಷಣೆಗೆ ಫ್ರೂಟ್ ಬ್ಯಾಗ್: ಪೇರಲ ಗಿಡದ ಪ್ರತಿ ಹಣ್ಣುಗಳನ್ನು ಕೀಟಬಾಧೆಯಿಂದ ರಕ್ಷಿಸಲು ಫ್ರೂಟ್ ಬ್ಯಾಗ್ ಕಟ್ಟಲಾಗಿದೆ. ಅತಿಯಾದ ಸೂರ್ಯಕಿರಣದಿಂದ ಹಣ್ಣುಗಳನ್ನು ಕಾಪಾಡಲು ಹಣ್ಣಿನ ರಕ್ಷಣಾ ಬೀಲಗಳು ಸಹಕಾರಿಯಾಗುತ್ತವೆ. ಅಲ್ಲದೆ, ಹೊಲದಲ್ಲಿ ಫೆರಾಮಿನ್ ಟ್ರಾಪ್ ಮತ್ತು ಹಳದಿ ಅಂಟು ಪ್ಯಾಡ್‌ಗಳನ್ನು ಅಲ್ಲಲ್ಲಿ ಅಳವಡಿಸಲಾಗಿದೆ.



ಮಾರುಕಟ್ಟೆ ವ್ಯವಸ್ಥೆ

ತಮ್ಮದೇ ಮಾರುಕಟ್ಟೆ ವ್ಯವಸ್ಥೆ ಕಂಡುಕೊಂಡಿರುವ ಅವರು 'ಕನ್ಸ್ಯುಮರ್ ಫೊರಂ' ಹೆಸರಿನಲ್ಲಿ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿದ್ದಾರೆ. ಅನೇಕ ಗ್ರಾಹಕರು ಅಲ್ಲಿಂದಲೇ ಆರ್ಡರ್ ಪಡೆಯುತ್ತಾರೆ. ಇದರ ಜತೆಗೆ ಧಾರವಾಡ ಕೃಷಿ ವಿವಿ, ಕರ್ನಾಟಕ ಗ್ರಾಮೀಣ ಬ್ಯಾಂಕ್, ಇನ್ನಿತರ ಬ್ಯಾಂಕ್, ಎಲ್‌ಐಸಿ ಕಚೇರಿಗೂ ಹಣ್ಣುಗಳನ್ನು ಸರಬರಾಜು ಮಾಡುತ್ತಾರೆ. ಬೆಳೆ ಬೆಳೆಯಲು ಧಾರವಾಡ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮತ್ತು ಕೃಷಿ ವಿವಿ ಸಿಬ್ಬಂದಿ ಮಾರ್ಗದರ್ಶನ ಪಡೆದಿದ್ದಾರೆ.

ಸಮಗ್ರ ಕೃಷಿ

4 ಎಕರೆ ಜಮೀನಿನ ಸುತ್ತ 200 ಸಾಗವಾನಿ, 80 ಮಾವು, 70 ತೆಂಗು, 120 ಕರಿಬೇವು, ಏಲಕ್ಕಿ ಬಾಳೆ, ಚಿಕ್ಕು, ಪಪ್ಪಾಯ, ಹಲಸು, ದಾಲ್ಚಿನ್ನಿ, ನುಗ್ಗೆ, ಸೀತಾಫಲ, ಬೆಟ್ಟದ ನೆಲ್ಲಿ, ಲಕ್ಷ್ಮಣ ಫಲ, 10 ಗುಂಟೆಯಲ್ಲಿ ಚೆಂಡು ಹೂವು ಕೃಷಿ, 8 ಬೇವಿನ ಗಿಡಗಳನ್ನು ಬೆಳೆಸಿದ್ದು, ವಿವಿಧ ಗಿಡ ಮರಗಳೊಂದಿಗೆ ಸಮಗ್ರ ಕೃಷಿ ಮಾಡಿದ್ದಾರೆ.



ಗುಲಾಬಿಯಲ್ಲಿ ಉತ್ತಮ ಆದಾಯ

2023ರ ಜೂನ್‌ನಲ್ಲಿ 26 ಗುಂಟೆ ಜಮೀನಿನಲ್ಲಿ 10 ಸಾವಿರ ಬ್ಲಾಕ್ ಮಾಜಿಕ್ ತಳಿಯ ಗುಲಾಬಿ ಹೂವುಗಳ ಸಸಿಗಳನ್ನು ನಾಟಿ ಮಾಡಲಾಗಿದೆ. 3 ತಿಂಗಳಿಗೆ ಹೂವುಗಳ ಕಟಾವು ಆರಂಭವಾಗಿದ್ದು, ಅಲ್ಲಿಂದ ಈವರೆಗೂ ಪ್ರತಿದಿನ 60 ರಿಂದ 70 ಕಟ್ಟುಗಳನ್ನು ಮಾರಾಟ ಮಾಡಲಾಗುತ್ತಿದೆ. ಎರಡು ವರ್ಷದಲ್ಲಿ 10 ಲಕ್ಷ ರೂ.ಗೂ ಅಧಿಕ ಆದಾಯವಾಗಿದೆ. ಚೆಂಡು ಹೂವುಗಳಿಂದ 40 ಸಾವಿರ ರೂ., ಮಾವಿನ ಹಣ್ಣು ಮಾರಾಟದಿಂದ 1 ಲಕ್ಷ ರೂ., ಆದಾಯ ಬಂದಿದೆ.

Vijayavani Pg 09